4. ಪೋಲೀಸ್ ಇನ್ಸ್‌ಪೆಕ್ಟರ್‌ಗಳು	21	2
5. ಪೋಲೀಸ್ ಸಬ್-ಇನ್ಸ್‌ಪೆಕ್ಟರಗಳು	32	6
6. ಸಹಾಯಕ ಪೋಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳು	56	15
7. ಹೆಡ್‌ಕಾನ್ಸ್‌ಟೇಬಲ್‌ಗಳು	250	58
8. ಪೋಲೀಸ್ ಕಾನ್ಸ್‌ಟೇಬಲ್‌ಗಳು	820	295
ಒಟ್ಟು	1186	377

2. ಹೆಚ್ಚಿನ ಪೋಲೀಸ್ ಸಿಬ್ಬಿಂದಿಗೆ ಬೇಡಿಕೆ ಬಂದಿಲ್ಲ.

3. ಉದ್ಭವಿಸುವುದಿಲ್ಲ.

ವಿಷಯ :- ಪಿ.ಸಿ.ಆರ್. ಅಟ್ರಾಸಿಟಿ ಕಾನೂನು ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1582 (1383)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮುಕೂರು ಜಿಲ್ಲೆಯಲ್ಲಿ ಕಳೆದ 8 ತಿಂಗಳಿಂದ ಪಿ.ಸಿ.ಆರ್.ಅಟ್ರಾಸಿಟಿ ಕಾನೂನು ಅನ್ವಯ ಬಂದಿರುವ ದೂರುಗಳೇನು ಮತ್ತು ಎಷ್ಟು?

ಆ) ದೂರಿನಂತೆ ಕೋರ್ಟಿಗೆ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು?

ಇ) ಅಟ್ರಾಸಿಟಿ ಕಾನೂನನ್ನು ದುರುಪಯೋಗಪಡಿಸಿಕೊಂಡು ಹರಿಜನರನ್ನು ಪ್ರಚೋದಿಸಿ ದೂರುಗಳನ್ನು ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ, ನಿರಪರಾಧಿಗಳು ಅಟ್ರಾಸಿಟಿ ಕೇಸಿನ ದುರುಪಯೋಗದಿಂದಾಗಿ ತೊಂದರೆ ಪಡುತ್ತಿದ್ದು ಪೋಲೀಸ್ ಅಧಿಕಾರಿಗಳು ಮೂಕ ಪ್ರೇಕ್ಷಕರಂತೆ ವರ್ತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಇದರ ದುರುಪಯೋಗದಿಂದಾಗಿ ಹರಿಜನರು ಮತ್ತು ಇತರೆ ಜನರ ಮಧ್ಯೆ ವೈಷಮ್ಯ ಜಾಸ್ತಿಯಾಗುತ್ತಿಲ್ಲವೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಗೃಹ ಸಚಿವರು):-

ಅ) ದಿನಾಂಕ: 1-1-95ರಿಂದ ಇಲ್ಲಿಯವರೆಗೆ ತುಮುಕೂರು ಜಿಲ್ಲೆಯಲ್ಲಿ ಎಸ್.ಸಿ:ಎಸ್.ಟಿ ಅಟ್ರಾಸಿಟಿ ಕಾನೂನಿನನ್ವಯ 51 ದೂರುಗಳನ್ನು ಮತ್ತು ಪಿ.ಸಿ.ಆರ್.ಕಾಯ್ದೆ ಅನ್ವಯ 6 ದೂರುಗಳನ್ನು ಸ್ವೀಕರಿಸಲಾಗಿದೆ.

ಆ) ಎಸ್.ಸಿ.ಎಸ್.ಟಿ. ಅಟ್ರಾಸಿಟಿ ಕಾನೂನಿನನ್ವಯ 51 ದೂರುಗಳಲ್ಲಿ, 22 ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದೆ. ಉಳಿದ 29 ಪ್ರಕರಣಗಳು ತನಿಖೆಯ ಹಂತದಲ್ಲಿದೆ. ಪಿ.ಸಿ.ಆರ್.ಕಾಯ್ದೆ ಅನ್ವಯ 6 ಪ್ರಕರಣಗಳಲ್ಲಿ 3 ಪ್ರಕರಣಗಳಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು, ಉಳಿದ 3 ಪ್ರಕರಣಗಳು ತನಿಖೆಯ ಹಂತದಲ್ಲಿವೆ.

ಇ) ಇಂತಹ ಪ್ರಕರಣಗಳು ದಾಖಲಾಗಿರುವ ಬಗ್ಗೆ ಯಾವುದೇ ವರದಿಗಳು ಸರ್ಕಾರರದ ಗಮನಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ :- ತುಮಕುರು ಜಿಲ್ಲೆಯ ಕೆರೆಗಳ ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1583 (992)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ತುಮುಕೂರು ಜಿಲ್ಲೆ ಬುಕ್ಕಾಪಟ್ಟಣ, ರಾಮಲಿಂಗಪುರ, ಬೋರನ ಕಣಿವೆ ಕೆರೆಗಳ ಅಭಿವೃದ್ಧಿಗಾಗಿ ಮುಖ್ಯ ಅಭಿಯಂತರರು, ಮಾನಿಟರಿ ಮತ್ತು ಎವಾಲ್ಯುಎಶನ್ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇದೆಯೆ ಹಾಗಿದ್ದಲ್ಲಿ, ಅವುಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಈ ಕೆರೆಗಳ ನಾಲೆಗಳು ಮಣ್ಣಿನಿಂದ ಮುಚ್ಚಿಹೋಗಿದ್ದು ನೀರು ಸಮರ್ಪಕವಾಗಿ ನಿಲ್ಲದೆ ಬೆಳೆಗಳಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ)ಹಾಗಿದ್ದಲ್ಲಿ ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):-

ಅ) ಬೋರನ ಕಣಿವೆ ಜಲಾಶಯ ಅಭಿವೃದ್ಧಿಗಾಗಿ ರೇಖಾ ಅಂದಾಜನ್ನು ತಯಾರಿಸಲಾಗಿದ್ದು, ಪರಿಶೀಲನೆಯಲ್ಲಿದೆ. ಬುಕ್ಕಾಪಟ್ಟಣ ಮತ್ತು ರಾಮಲಿಂಗಾಪುರ ಕೆರೆಗಳ ಅಭಿವೃದ್ಧಿಗೆ ಅಂದಾಜನ್ನು ತಯಾರಿಸಿಲ್ಲ.

ಆ) ಬಂದಿದೆ.

ಇ) ಬೋರನ ಕಣಿವೆ ಜಲಾಶಯ ಅಭಿವೃದ್ಧಿ ಯೋಜನೆಯನ್ನು ರಾಷ್ಟ್ರೀಯ ಜಲನಿರ್ವಹಣಾ ಯೋಜನೆಯಲ್ಲಿ ಸೇರಿಸಲು ಉದ್ದೇಶಿಲಾಗಿದ್ದು, ಇದು ಪರಿಶೀಲನೆಯಲ್ಲಿದೆ.

ವಿಷಯ :- ಮುಖ್ಯಮಂತ್ರಿಯವರ ವಿದೇಶಯಾತ್ರೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1585 (1025)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಖ್ಯ ಮಂತ್ರಿಗಳು ಮತ್ತು ಅವರ ಸಿಬ್ಬಂದಿ ಕಳೆದ ಆರು (6) ತಿಂಗಳಿಂದ ವಿದೇಶಿ ಪ್ರವಾಸಕ್ಕಾಗಿ ಖರ್ಚು ಮಾಡಿದ ಹಣವೆಷ್ಟು (ಪ್ರತ್ಯೇಕ ವಿವರ ಒದಗಿಸುವುದು)

ಆ) ವಿದೇಶ ಯಾತ್ರೆಯಿಂದ ರಾಜ್ಯಕ್ಕಾದ ಲಾಭವೆಷ್ಟು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) ಮುಖ್ಯ ಮಂತ್ರಿಗಳು -ರೂ. 1,42,245-00
ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ರೂ. 41,854-00

ಆ) ಮುಖ್ಯ ಮಂತ್ರಿಗಳ ದಾವೋಸ್ ಪ್ರವಾಸದಲ್ಲಿ ಅಂತರ್ ರಾಷ್ಟ್ರೀಯ ಪ್ರಮುಖ ಕಂಪನಿಗಳ ಕಛ್ಹಾನ್‌ರೊಂದಿಗೆ ಹಾಗೂ ಮುಖ್ಯ ಅಧಿಕಾರಿಗಳೊಂದಿಗೆ ವಿಚಾರ ವಿಮರ್ಶೆ ಮಾಡುವ ಹಾಗೂ ಕರ್ನಾಟಕ ರಾಜ್ಯದಲ್ಲಿ ಬಂಡವಾಳ ಹೂಡಿಕೆಯ ಬಗ್ಗೆ ಪ್ರತ್ಯೇಕ ಮಾತುಕತೆ ಅವಕಾಶವನ್ನು